ಮಧ್ಯಾಹ್ನದ ಬಿಸಿಲು ಸುತ್ತಲೂ ಎರಚಾಡಿದ್ದು ಆ ಬಿಸಿಲಿನಲ್ಲಿ ಮಿಂದ, ಹಸುರಾದ ಬತ್ತದ ಸಸಿಗಳು ಕಣ್ಣಿಗೆ ತಂಪಾಗಿ, ಅಂದವಾಗಿ ಕಂಡವು. ಕಣ್ಣು ಹರಿಸಿದಷ್ಟು ದೂರವೂ ಹಸಿರೇ ಹಸಿರು. ಅಷ್ಟು ದೂರದಿಂದ ಶ್ರಮಪಟ್ಟು ಬಂದುದು ಸಾರ್ಥಕವೆನಿಸಿತು ಸುಮತಿಗೆ; ಬೆಂಗಳೂರಿನಲ್ಲಿ ಎಲ್ಲಿ ಕಾಣ ಸಿಗಬೇಕು ತನಗೆ ಈ ಪ್ರಕೃತಿ ಸೌಂದರ್ಯ? ಅಲ್ಲಿ ಏನಿದ್ದರೂ ಎಲ್ಲವೂ ಕೃತಕ. ಮನುಷ್ಯ ನಿರ್ಮಿತ.

**ಸುಂದರವಾದ ಪ್ರಕೃತಿಯ ಮಡಿಲಲ್ಲಿ ಹಾವಿನಂತಹ ವಿಷಜಂತುಗಳೂ ಇವೆ**

